ಉ) ಸರ್ಕಾರಿ ಕಟ್ಟಡಗಳಲ್ಲಿ ಅವಧಿ ವಿೂರಿ ವಾಸಿಸುತ್ತಿರುವ ಮಾಜಿ ಸಚಿವರುಗಳಿಗೆ ಲೋಕೋಪಯೋಗಿ ಇಲಾಖೆ ನಿಗದಿ ಪಡಿಸುವ ದಂಡ ರೂಪದ ಬಾಡಿಗೆ ನೀಡುವಂತೆ ತಿಳಿಸಲಾಗಿದೆ.

ಪರಿಶಿಷ್ಟ ಜನಾಂಗದ ಅಭ್ಯರ್ಥಿಗಳನ್ನು ನೇರವಾಗಿ ಸರ್ಕಾರಿ ಹುದ್ದೆಗಳಲ್ಲಿ ನೇಮಕಾತಿ ಮಾಡುವ ಬಗ್ಗೆ

೬೫ (೩೩೦) (ಬಿ) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ಕಾರದ ತೀರ್ಮಾನದಂತೆ ಸರ್ಕಾರೀ ನೌಕರಿಯಲ್ಲಿ ನೇರವಾಗಿ ಅರ್ಹತೆಯ ಆನುಗುಣವಾಗಿ ನೇಮಕಾತಿ ಹೊಂದಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಇಲಾಖೆಗಳಲ್ಲಿ ಅರ್ಹ ಪರಿಶಿಷ್ಟ ಜನಾಂಗದ ಅಭ್ಯರ್ಥಿಗಳನ್ನು ನೇಮಕಾತಿ ಮಾಡುವುದರಲ್ಲಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ?

ಇ) ೧೯೮೩ರ ನಂತರ ಸರ್ಕಾರದ ತೀರ್ಮಾನದಂತೆ ಅರ್ಹ ಅಭ್ಯರ್ಥಿಗಳ ಹೆಸರೇನು (ಜಿಲ್ಲಾವಾರು ವಿವರ ಒದಗಿಸುವುದು) ;

ಈ) ನೇಮಕಾತಿಯಲ್ಲಿ ವಿಳಂಬವಾಗುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಮಾನಸಿಕ ಹಾಗೂ ಆರ್ಥಿಕ ಹಾನಿಗಾಗಿ ಕಾರಣಕರ್ತರಾಗಿರುವ ಅಡೆತಡೆಗಳನ್ನು ದೂರ ಮಾಡಲು ಸರ್ಕಾರದಿಂದ ತೆಗೆದು ಕೊಂಡಿರುವ ಕ್ರಮವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಗೊತ್ತುಪಡಿಸಿದ ಕೆಲವು ಪದವಿ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಅತಿ ಹೆಚ್ಚಿನ ಅಂಕಗಳಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಲ್ಲೇ ಪ್ರಥಮ, ದ್ವಿತೀಯ ಅಥವಾ ತೃತೀಯ ಸ್ಥಾನ ಗಳಿಸಿ ಪ್ರಥಮ ಪ್ರಯತ್ನದಲ್ಲಿಯೇ ತೇರ್ಗಡೆ ಹೊಂದಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ರಾಜ್ಯ ಸರ್ಕಾರದ ಕೆಲವು 'ಎ' ಮತ್ತು 'ಬಿ' ಗುಂಪಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳುವ ಸರ್ಕಾರದ ಕಾರ್ಯ ನೀತಿಯಂತೆ ೨೬ ಜನ ಅಭ್ಯರ್ಥಿಗಳನ್ನು 'ಎ' ಗುಂಪಿನ ಹುದ್ದೆಗಳಿಗೂ ಮತ್ತು ೯ ಜನ ಅಭ್ಯರ್ಥಿಗಳನ್ನು 'ಬಿ' ಗುಂಪಿನ ಹುದ್ದೆಗಳಿಗೆ ಆಯ್ಕೆ ಮಾಡಲಾಗಿತ್ತು.

ಆ) ಈ ನೇಮಕಾತಿಗಾಗಿ ರಚಿಸಲಾಗಿದ್ದ ವಿಶೇಷ ನಿಯಮಾವಳಿಯು ಕಾನೂನು ಬದ್ಧತೆಯನ್ನು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : ೧೨೫೨೯ : ೮೫ರ ಮೂಲಕ ಪ್ರಶ್ನಿಸಲಾಗಿದ್ದು ರಾಜ್ಯ ಉಚ್ಚ ನ್ಯಾಯಾಲಯವು ವಿಶೇಷ ನಿಯಮಾವಳಿಯ ಕಾರ್ಯಜಾರಣೆಗೆ ತಡೆಯಾಜ್ಞೆ ನೀಡಿದೆ. ಆದುದರಿಂದ, ನೇಮಕಾತಿ ಕಾರ್ಯವನ್ನು ಸಧ್ಯಕ್ಕೆ ನಿಲ್ಲಿಸಲಾಗಿದೆ.

ಇ) ನ್ಯಾಯಾಲಯದ ತಡೆಯಾಜ್ಞೆಯಿಂದಾಗಿ ಆಯ್ಕೆ ಕಾರ್ಯವನ್ನು ನಿಲ್ಲಿಸಲಾಗಿರುವುದರಿಂದ ನೇಮಕಾತಿಗೆ ಅರ್ಹರಾಗುವ ಎಲ್ಲಾ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ತಯಾರಿಸಿಲ್ಲ. ಈಗಾಗಲೇ ಆಯ್ಕೆಯಾಗಿರುವ ೩೫ ಜನ ಅಭ್ಯರ್ಥಿಗಳ ಪಟ್ಟಿಯನ್ನು ಲಗತ್ತಿಸಿದೆ.

ಈ) ತಡೆಯಾಜ್ಞೆಯನ್ನು ತೆರವು ಮಾಡುವಂತೆ ಸರ್ಕಾರವು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಆದರೆ ತಡೆಯಾಜ್ಞೆಯನ್ನು ತೆರವು ಮಾಡಲು ನ್ಯಾಯಾಲಯವು ನಿರಾಕರಿಸಿತು. ಈ ಪ್ರಕರಣವನ್ನು ಆದಷ್ಟು ಬೇಗನೆ ಪರಿಶೀಲಿಸಿ ತೀರ್ಪು ನೀಡುವಂತೆ ನ್ಯಾಯಾಲಯಕ್ಕೆ ಅಡ್ವೋಕೇಟ್ ಜನರಲ್‌ರವರ ಮುಖಾಂತರ ಪದೇ ಪದೇ ಮನವಿ ಮಾಡಿಕೊಳ್ಳಲಾಗುತ್ತಿದೆ.

Sl. No.	Name of the selected candidates	Posts for which selected
	Sriyuths:	
1)	Sylini Manohar	Asst. Surgeons or equivalent posts in the Health and Family Welfare Department or Lecturers in Medical, Education Department.
2)	Satya Prakash	-do-
3)	Vijayakumar P. T.	-do-
4)	Thinakarana M. S.	-do-
5)	Mahesh kumar K.	-do-
6)	Ramakka K.	-do-
7)	Mangalagowri M.	-do-
8)	Thoyajakshi Bai S.	-do-
9)	Damayanthi U.	-do-
10)	Ashok Kumar B.	-do-
11)	Prakash M.	-do-
12)	Mllangovan K.	-do-
13)	Ravivarma T.	-do-
14)	Ashok Kumar K.	-do-
15)	Shylajakumari C. R.	-do-
16)	Lakshmi Sridas	-do-
17)	Sulochana K. Ninnekar	-do-
18)	Thimmaiah N.	-do-
19)	Vasudeva Murthy S. N.	-do-
20)	Dhanalakshmi T. R.	-do-
21)	Kumar	-do-
22)	Narendra H. R.	-do-
23)	Venkatesh S. Guddimani	-do-
24)	N. Kumda	-do-
25)	Goni Shankar	-do-
26)	Rajendra Kumar Katte	-do-
27)	C. R. Venkataraju	Agricultural Officer or Asst. Agricultural Officer.
28)	M. Mallaiah	-do-
29)	K. Krishnappa	-do-
30)	B. Shivaraju	-do-
31)	H. S. Chidambara Murthy	-do-
32)	M. Jayaramaiah	-do-
33)	Padmanabha M. C.	Asst. Surgeons of Veterinary Services.
34)	Anand G.	-do-
35)	B. Basavalingappa	-do-